ನೀಲಿ ಹುಡುಗ

ಲೇಖಕಃ ಮಾರ್ಟಿನ ಆಯುರ

ಚಿತ್ರಃ ಸಾಯಮೋನ ಕ್ಲೇಜಿಸ

ಕನ್ನಡಕ್ಕೆಃ ಪ್ರಭಾಕರ ನಾನಾವಟಿ




ಬಹು ದೂರದಲ್ಲಿ –ಗ್ರಹ ನಕ್ಷತ್ರಗಳಿಗಿಂತ ದೂರ – ಒಂದು ಆಕಾಶಗಂಗೆ ಇತ್ತು.
ಅಂತರಿಕ್ಷದಲ್ಲಿ ಬಹು ದೂರ ಹೋದ ಮೇಲೆ ತಮ್ಮ ಸುತ್ತ ತಿರುಗುವ ಗ್ರಹಗಳನ್ನು ನೋಡುವದು ಒಂದು ರೋಮಾಂಚಕಾರಿ ಅನುಭವ.
ನಾವು ಸಾಕಷ್ಟು ದೂರ ಅಂತರದವರೆಗೆ ಹೋದಾಗ – ಎಷ್ಟು ಶಕ್ಯವಿದೆಯೋ ಅಷ್ಟು ದೂರ ಹೋದಾಗ- ಕೊನೆಯಲ್ಲಿ ನಮ್ಮ ಗ್ರಹದಂತೆ ಇರುವ ಇನ್ನೊಂದು ಗ್ರಹ ಕಾಣಲು ಸಿಗುವದು.

ದೂರದಲ್ಲಿರುವ ಈ ಗ್ರಹದ ಆಕಾರ ಪೃಥ್ವಿಯ ಆಕಾರದಷ್ಟೇ ಇತ್ತು. ಅಲ್ಲಿಯ ಜನರು ಕೂಡ ನಮ್ಮ ಹಾಗೆಯೇ ಇದ್ದರು. ಕೇವಲ ಒಂದು ಸಂಗತಿಯಲ್ಲಿ ನಮಗಿಂತ ಅವರು ಬೇರೆಯಾಗಿ ಕಾಣುತ್ತಿದ್ದರು. ಅವರೆಲ್ಲರ ಮೈಬಣ್ಣ ನೀಲಿ ಬಣ್ಣದ್ದಾಗಿತ್ತು. ಹಾಗು ತಮಗೆ ಮಾತುಗಳು ಕೇಳದೆ ಇರಬೇಕಾದಲ್ಲಿ ಕಿವಿಗಳು ತಮ್ಮಷ್ಟಕ್ಕೆ ತಾವೇ ಮುಚ್ಚಿಕೊಳ್ಳುತ್ತಿದ್ದವು.



ಈ ಗ್ರಹದ ಮೇಲೆ ಒಮ್ಮೆ ತುಮುಲವಾದ ಯುದ್ಧ ನಡೆಯಿತು. ಈ ಯುದ್ಧದಲ್ಲಿ ನೀಲಿ ಬಣ್ಣದ ಸಾಕಷ್ಟು ಜನ ಮೃತರಾದರು.

ಇದರಿಂದಾಗಿ ಸಾಕಷ್ಟು ಮಕ್ಕಳು ತಮ್ಮ ತಾಯಿ-ತಂದೆಗಳನ್ನು ಕಳೆದುಕೊಂಡರು. ಅಲ್ಲಿಯೇ ಒಂದುನೀಲಿ ಮಗು ಆ ಹಾಳಾದ ಮನೆಮಾರುಗಳಲ್ಲಿಯ ಒಂದು ಕಲ್ಲಿನ ಮೇಲೆ ಕುಳಿತು ದುಃಖಿಸುತ್ತಿದ್ದನು. ಅವನ ತಾಯಿ-ತಂದೆಗಳಿಬ್ಬರು ಯುದ್ಧದಲ್ಲಿ ಕೊಲ್ಲಲ್ಪಟ್ಟಿದ್ದರು.



ಆತ ಒಂದೇ ಸವನೆ ಅಳುತ್ತಲೇ
ಕುಳಿತುಕೊಂಡಿದ್ದನು .

ಕೊನೆಗೆ ಅವನ ಕಣ್ಣಲ್ಲಿಯ ನೀರು ಬತ್ತಿ
ಹೋದವು. ಆ ಮೇಲೆ ಆತನು ಎದ್ದು ನಿಂತನು. .



ಅವನು ಕಣ್ಣೊರಸುತ್ತ ತನ್ನ ಜಾಕೆಟ್ಟಿನ ಕಾಲರನ್ನು ಮೇಲೆ ಮಾಡಿ
ಕೈಗಳನ್ನು ಕಿಸೆಯಲ್ಲಿ ತುರುಕಿ ಮುಂದೆ ನಡೆಯತೊಡಗಿದನು.



ದಾರಿಯಲ್ಲಿ ಕಲ್ಲು ಕಂಡರೂ ಅದನ್ನು
ಒದ್ದು ಮುನ್ನಡೆಯುತ್ತಿದ್ದನು..

ಹೂ ಕಂಡರೂ ಕೂಡ ಅವುಗಳನ್ನು
ಕಾಲಿನಿಂದ ತುಳಿಯುತ್ತಿದ್ದನು.


ಅವನೆದುರಿನಿಂದ ಒಂದು ನಾಯಿಮರಿ ಬರುತ್ತಿತ್ತು ಮರಿ ಅವನನ್ನು
ಕಂಡು ಬಾಲ ಅಲುಗಾಡಿಸತೊಡಗಿತು. .


ನಾಯಿಮರಿ ಅವನ ಹಿಂದೆ
ಹಿಂದೆ ಬರತೊಡಗಿತು.

“ದೂರ ಹೊರಟು ಹೋಗು !” ಹುಡುಗ
ಜೋರಾಗಿ ಕೂಗಿ ಹೇಳಿದನು.


“ನೀನು ನನ್ನ ಜತೆ ಬಂದರೆ ನಿನ್ನ ಜೋಪಾಸನೆ ನನಗೆ ಮಾಡಬೇಕಾಗುವದು.
ಆದರೆ ನಾನು ಇನ್ನು ಮುಂದೆ ಯಾರದೂ ಜೋಪಾಸನೆ ಮಾಡಲಾರೆ.”

ನಾಯಿಮರಿ ಮತ್ತೊಮ್ಮೆ ಅವನನ್ನು ದಿಟ್ಟಿಸಿ ನೋಡಿತು. ಹಾಗು ಆನಂದದಿಂದ ಬಾಲ ಅಲುಗಾಡಿಸತೊಡಗಿತು.

ಆ ಮೇಲೆ ಆ ಹುಡುಗನು ದಾರಿಯಲ್ಲಿ ಓರ್ವ ಮೃತ ಸೈನಿಕನ ಹತ್ತಿರ ಬಿದ್ದಿದ್ದ ಬಂದೂಕನ್ನು ತೆಗೆದುಕೊಂಡನು.



ಅವನು ಬಂದೂಕಿನ ತುದಿಯನ್ನು ನಾಯಿಮರಿಯ ಮೂಗಿನ ಹತ್ತಿರ ಹಿಡಿದು ‘ಬೇಕಿದ್ದರೆ ನಾನು ಈ ಕೋವಿಯಿಂದ ನಿನ್ನನ್ನು ಕೊಲ್ಲಬಹುದು.’ ಅವನು ಸಿಟ್ಟಿನಲ್ಲಿಯೇ ಹೇಳಿದನು.



ನಾಯಿಮರಿ ಅಂಜಿ ಅವನಿಂದ ದೂರ ಓಡಿ ಹೋಯಿತು.





“ನೀನು ನನ್ನ ಜತೆ ಇರಬಹುದೇ?” ಹುಡುಗನು ಬಂದೂಕಿಗೆ ಕೇಳಿದನು. “ನೀನೇ ನನ್ನ ನಿಜವಾದ ಗೆಳೆಯ. “

ಅವನು ಮಗ್ಗುಲಲ್ಲಿಯೇ ಇದ್ದ ಒಂದು ಒಣ ಗಿಡದ ಮೇಲೆ ಬಂದೂಕು ಹಾರಿಸಿದನು.

ಸ್ವಲ್ಪ ಸಮಯದ ಮೇಲೆ ಆತನಿಗೆ ದಾರಿಯಲ್ಲಿ ಒಂದು ವಿಮಾನ ಕೆಳಗೆ ಬಿದ್ದದ್ದು ಕಂಡಿತು.



ವಿಮಾನದಲ್ಲಿ ಕುಳಿತು ಆತನು ಕೀಲಿಕೈಯನ್ನು ತಿರುವಿದನು.





ಒಮ್ಮೆಲೆ ವಿಮಾನವು ಹವೆಯಲ್ಲಿ ಹಾರತೊಡಗಿತು. .

“ನನ್ನ ಹತ್ತಿರ ಬಂದೂಕು ಹಾಗು ವಿಮಾನಗಳಿವೆ ,” ಹುಡುಗ ತನ್ನಷ್ಟಕ್ಕೆ ತಾನೇ ಅಂದುಕೊಂಡನು. “ಇವರೇ ನನ್ನ ಪರಿವಾರದ ಸದಸ್ಯರು. ಬೇಕಿದ್ದರೆ ನಾಯಿಕುನ್ನಿಯನ್ನು ಇಟ್ಟುಕೊಳ್ಳಬಹುದಾಗಿತ್ತು. ಆದರೆ ಅದನ್ನು ಯಾರಾದರೂ ಕೊಂದು ಬಿಟ್ಟರೆ ನನ್ನ ಎದೆಗೆ ನೋವು ಉಂಟಾಗುತ್ತಿತ್ತು. ಹಾಗು ಆ ನೋವಿನಿಂದ ನಾನೂ ಕೂಡ ನಾಯಬಹುದಾಗಿತ್ತು. ”



ಹವೆಯಲ್ಲಿ ಹಾರಾಡುತ್ತಿರುವಾಗ ಅವನಿಗೆ
ಒಂದು ಮನೆ ಕಾಣಿಸಿತು.



“ಇಲ್ಲಿ ಯಾರೋ ಇದ್ದ ಹಾಗೆ ಕಾಣುತ್ತದೆ,” ಅವನು
ಅಚ್ಚರಿಯಿಂದ ನುಡಿದನು. .



ವಿಮಾನದಲ್ಲಿ ಕುಳಿತು ಆ ಮನೆಗೆ
ನಾಲ್ಕಾರು ಸುತ್ತು ಹಾಕಿ ಕಿಂಡಿಯಿಂದ
ಅವನು ಒಳಗೆ ನೋಡಿದನು.



ಮನೆ ಒಳಗೆ ಒಂದು ಮುಪ್ಪಾದ ಮುದುಕಿ
ಅಡಿಗೆ ಮಾಡುತ್ತಿದ್ದಳು.

ಹುಡುಗ ವಿಮಾನದಿಂದ ಕೆಳಗೆ ಇಳಿದು, ಕೋವಿಯಲ್ಲಿ
ಮದ್ದಿನ ಗುಂಡನ್ನು ತುಂಬಿ, ಮನೆ ಒಳಗೆ ಹೊಕ್ಕನು.
“ನನ್ನ ಹತ್ತಿರ ಬಂದೂಕು ಇದೆ. “
ಹುಡುಗನು ಆ ಮುದುಕಿಗೆ ಹೇಳಿದನು.
ನನಗೆ ಏನಾದರೂ ತಿನ್ನಲಿಕ್ಕೆ ತಿಂಡಿ ಕೊಡು .

“ಹಾಗೆ ನೋಡಿದರೆ ನಾನು ನಿನಗೆ ತಿನ್ನಲಿಕ್ಕೆ ಏನಾದರೂ ಕೊಡುವವಳಿದ್ದೆ,” ಮುದುಕಿ ಹೇಳತೊಡಗಿದಳು . “ಮೊದಲು ಬಂದೂಕನ್ನು ಕೆಳಗೆ ಇಡು. ”
“ನನ್ನ ಮೇಲೆ ದಯೆ ಬೇಡ !” ಹುಡುಗ ಮುದುಕಿಗೆ ಜಬರಿಸಿ ಹೇಳಿದನು. “ನನಗೆ ಬೇಕಿದ್ದರೆ ಈ ಬಂದೂಕಿನಿಂದ ನಿನ್ನನ್ನು ಕೊಲ್ಲಬಹುದಾಗಿತ್ತು. ”
ಆ ಮೇಲೆ ಮುದುಕಿ ಅವನಿಗೆ ತಿನ್ನಲು ತಿಂಡಿಯನ್ನು ಕೊಟ್ಟಳು.
ಆ ಹುಡುಗ ವಿಮಾನದಲ್ಲಿ ಕುಳಿತು ಹಾರಿ ಹೋದನು.

ಇದೇ ಆ ಹುಡುಗನ ಜೀವಿಸುವ
ರೀತಿಯಾಯಿತು.

ಅವನು ಒಂದು ಹರಕು ಮರುಕಾದ
ಮನೆಯಲ್ಲಿ ಒಬ್ಬನೇ ಇರತೊಡಗಿದನು.

ಹಸಿವೆಯಾದಾಗ ಹಾರುತ್ತ ಜನರಿರುವ
ವಸತಿಯಲ್ಲಿ ಹೋಗುತ್ತಿದ್ದನು.

ಬಂದೂಕಿನ ತುದಿಯನ್ನು ಹಿಡಿದು ಅವರನ್ನು
ಬಂದೂಕಿನಿಂದ ಅಂಜಿಸಿ ಊಟ ಕೊಡಲು
ಒತ್ತಾಯಿಸುತ್ತಿದ್ದನು.

ಆ ಮೇಲೆ ನಿರ್ಮನುಷ್ಯ ರಣಾಂಗಣದ ಮೇಲೆ ವಿಮಾನದಲ್ಲಿ ಹಾರುತ್ತ
ದಾರಿಯ ಮೇಲಿನ ಹರಕುಮುರುಕ ಸಾಮಗ್ರಿಗಳನ್ನು ಶೇಖರಿಸುತ್ತಿದ್ದನು.





ಆ ಸಾಮಗ್ರಿಗಳನ್ನು ವಿಮಾನದಲ್ಲಿಟ್ಟು ತನ್ನ ಮನೆಗೆ
ತೆರಳುತ್ತಿದ್ದನು.

“ ಈ ಎಲ್ಲ ಸಾಮಗ್ರಿಗಳಿಂದ ನಾನು ಒಂದು ರೋಬೋ ಟ್ಯಾಂಕನ್ನು ಮಾಡುವೆ,” ಹುಡುಗನು ಹೇಳಿದನು.



“ಅದು ನೂರಾರು ಅಡಿ ಎತ್ತರದ ಹಾಗು ಸಾವಿರಾರು ಟನ್ನುಗಳಷ್ಟು ತೂಕವಿರುವ ರೋಬೊ. ಅದರ ತಲೆಯಲ್ಲಿ ನಾನು ಒಂದು ಕಂಟ್ರೋಲ್ ರೂಮನ್ನು ಮಾಡುವೆ. ಆಗ ನಾನು ಬಹು ಶಕ್ತಿಯುತನಾಗುವೆ. ಆಮೇಲೆ ನನಗೆ ಯಾರೂ ತೊಂದರೆ ಕೊಡಲಾರರು.”

ಒಂದು ದಿನ ಅವನಿರುವ ಮನೆ ಹತ್ತಿರದಿಂದ ಒಂದು ಹುಡುಗಿ ಹೋಗುತ್ತಿದ್ದಳು.

ಹುಡುಗನು ಬಂದೂಕನ್ನು ಎತ್ತಿ ಹೊರಗೆ ಬಂದು “ನೀನು ಇಲ್ಲಿಂದ ಹೊರಟು ಹೋಗು. ಇಲ್ಲದಿದ್ದರೆ ಈ ಬಂದೂಕಿನಿಂದ ನಿನ್ನನ್ನು ಕೊಂದು ಬಿಡುವೆ. !” ಎಂದು ಬೆದರಿಸಿದನು.



“ನಾನು ನಿನಗೆ ಯಾವದೇ ತೊಂದರೆ ಕೊಡುವದಿಲ್ಲ. ಇಲ್ಲಿ ಮತ್ತೇ ಮಶರೂಮಗಳು ಬೆಳೆದಿವೆಯೋ ಇಲ್ಲವೋ ಎಂಬುದನ್ನು ನೋಡಲು ಬಂದಿದ್ದೆ.”

“ನೀನು ಇಲ್ಲಿಂದ ಬೇಗ ಹೊರಟು ಹೊಗು. ನಾನು ಯಾರನ್ನೂ ನನ್ನ ಹತ್ತಿರ ಬರಿಸಿಕೊಡುವದಿಲ್ಲ.” ಹುಡುಗನು ಹೇಳಿದನು.



“ನೀನು ಇಲ್ಲಿ ಒಬ್ಬನೇ ಇರುತ್ತಿಯಾ?” ಹುಡುಗಿ ಕೇಳಿದಳು.



“ಒಬ್ಬನೇ ಇಲ್ಲ. ನನ್ನ ಜತೆ ಬಂದೂಕೂ ಹಾಗು ವಿಮಾನಗಳಿವೆ. ಇವರೇ ನನ್ನ ನೆಂಟಸ್ತರು.” ಹುಡುಗ ಉತ್ತರಿಸಿದನು.

“ಅಲ್ಲದೇ ಒಂದು ದಿನ ನನ್ನ ಹತ್ತಿರ ಒಂದು ಶಕ್ತಿಶಾಲಿ ರೋಬೋ ಟ್ಯಾಂಕ ಕೂಡ ಬರುವದು. !”





“ಅಂದರೆ ನಿನಗೆ ಯಾರೂ ನಿಜವಾದ ಗೆಳೆಯರಿಲ್ಲವೇ?” ಹುಡುಗಿ ಪ್ರಶ್ನಿಸಿದಳು.

“ಬೇಕಿದ್ದರೆ ನಾನು ಆ ನಾಯಿಕುನ್ನಿಯನ್ನು ನನ್ನ ಹತ್ತಿರ ಇಟ್ಟುಕೊಳ್ಳಬಹುದಿತ್ತು. ಆದರೆ ಆ ಕುನ್ನಿಯನ್ನು ಯಾರಾದರು ಕೊಂದರೆ ಆ ನೋವಿನಿಂದ ನಾನೂ ಕೂಡ ಸತ್ತು ಹೋಗುತ್ತಿದ್ದೆ.”



“ನನಗೂ ಕೂಡ ಯಾವ ನೆಂಟರಿಲ್ಲ. ಒಬ್ಬಳೇ ಇದ್ದೇನೆ. ಒಬ್ಬರನ್ನೊಬ್ಬರು ಜೋಪಾನ ಮಾಡುತ್ತ ನಾವು ಇರಬಹುದು. .” ಹುಡುಗಿ ಹೇಳಿದಳು.



“ನನಗೆ ಯಾರಾದರು ಬಂದು ಅವರನ್ನು ಕೊಲ್ಲುವ ಗೆಳೆಯರು ಬೇಡ .”

“ಅಯ್ಯೋ ಏನು ಗತಿ!, ಎಂದೂ ಸಾಯದ ಮನುಷ್ಯ ನಿನಗೆ ಹೇಗೆ ದೊರೆಯಬಹುದು?” ಹುಡುಗಿ ಕೇಳಿದಳು.”





ಆ ಮೇಲೆ ಅವಳು ಹೊರಟು ಹೋದಳು.

ಆ ಹುಡುಗ



ಒಂದು ಶಕ್ತಿಯುತವಾದ
ರೋಬೋ ಟ್ಯಾಂಕನ್ನು
ತಯಾರಿಸಿದನು.



ಅವನು ಅದನ್ನು
ಏರಿದನು.





ರೋಬೋದ ತುತ್ತ ತುದಿಯಲ್ಲಿ ರೋಬೋವನ್ನು
ನಿಯಂತ್ರಿಸುವ ಕಂಟ್ರೋಲ್ ಗಳೆಲ್ಲ ಇದ್ದವು. ಅವನು ಅಲ್ಲಿ
ಹೋಗಿ ಕುಳಿತನು.

ಆ ಮೇಲೆ ಆ ರೋಬೋ ಟ್ಯಾಂಕಿನಲ್ಲಿ ಕುಳಿತು ಆತನು ಎಲ್ಲ ಸ್ಥಳಗಳಿಗೆ ಹೋಗತೊಡಗಿದನು.



ಆ ರೋಬೋ ಟ್ಯಾಂಕನ್ನು ನೋಡಿದ ಕೂಡಲೇ ಸುತ್ತ ಮುತ್ತಲಿನ ಜನರೆಲ್ಲ ಅಂಜಿ ಚಿಲ್ಲಾಪಿಲ್ಲಿಯಾಗುತ್ತಿದ್ದರು. ಓಡಿ ಹೋಗುತ್ತಿದ್ದರು. ಆದರೆ ಅದರ ಕಣ್ಣನ್ನು ತಪ್ಪಿಸಿ ಉಳಿದು ಕೊಳ್ಳುವದು ಅಷ್ಟು ಸುಲಭವಾಗಿರಲಿಲ್ಲ.




ರೋಬೋ ಟ್ಯಾಂಕಿನ ತಲೆಯ ಮೇಲೆ ಆ ಹುಡುಗನು ಒಂದು ಲಾವುಡ ಸ್ಪೀಕರನ್ನು ಇಟ್ಟಿದ್ದನು.
ಹುಡುಗನು ಏನೇ ಮಾತಾಡಿದರೂ ಜೋರು ದನಿಯಲ್ಲಿ ಜನರಿಗೆ ಅದು ಕೇಳಿಸುತ್ತಿತ್ತು .


“ನೀವೆಲ್ಲರು ಬಾಂಬು ಹಾಗು ಬಂದೂಕಿನ ಗುಂಡುಗಳಿಂದ ಸುರಕ್ಷಿತರಾಗಿದ್ದಿರಾ?” ರೋಬೋ ಟ್ಯಾಂಕ ಕೂಗಿ ಕೇಳಿತು.
ಆದರೆ ಅವನು ಎಲ್ಲಿ ಹೋದಲ್ಲಿ ಜನರು ಅಂಜಿ ಓಡಿ ಹೋಗುತ್ತಿದ್ದರು. ಇಲ್ಲಿಯವರೆಗೆ ಸಾಯುವದಕ್ಕೆ ಅಂಜಲಾರದ ಒಬ್ಬ ಮನುಷ್ಯನು ಕೂಡ ಅವನಿಗೆ ದೊರೆತಿರಲಿಲ್ಲ.

ಒಂದು ದಿನ ಮಾತ್ರ ರೋಬೋ ಟ್ಯಾಂಕಿನೆದುರು ಅಂಜದೆ, ಅಳುಕದೆ ಒಬ್ಬನು ಏನೋ ಕೂಗಿ ಹೇಳಿತ್ತಿದ್ದನು. ಆದರೆ ಅದು ಆ ಹುಡುಗನಿಗೆ ಕೇಳಬರುತ್ತಿರಲಿಲ್ಲ.



ಏಕೆಂದರೆ ಹುಡುಗ ಬಹಳ ಎತ್ತರದ ಮೇಲೆ ಕುಳಿತಿದ್ದನು. ಹೀಗಾಗಿ ಅವನಿಗೆ ಏನು ಕೇಳಬರುತ್ತಿರಲಿಲ್ಲ.



ನಾನು ಇಂತಹ ವ್ಯಕ್ತಿಯನ್ನೇ ಹುಡುಕುತ್ತಲಿದ್ದೆ. ಹುಡುಗನು ಮನಸ್ಸಿನಲ್ಲಿಯೇ ಅಂದುಕೊಂಡನು. ಹಾಗು ರೋಬೋ ಟ್ಯಾಂಕಿನಿಂದ ಕೆಳಗಿಳಿದು ಬಂದನು.



ಕೆಳಗೆ ಆ ದಿನ ಅವನಿಗೆ ತಿಂಡಿ ತಿನ್ನಿಸಿದ ಮುದುಕಿ ನಿಂತಿತ್ತು.

“ನಿನಗೆ ಏನಾದರೂ ನನಗೆ ಹೇಳುವದಿದೆಯಾ?”
ಹುಡುಗನು ಕೇಳಿದನು.



“ಅಹುದು. ,” ಮುದುಕಿ ಹೇಳತೊಡಗಿದಳು .
“ನನಗೆ ಸಾಯುವದಕ್ಕೆ ಅಂಜಲಾರದ ಒಬ್ಬ ಮನುಷ್ಯನ ಪರಿಚಯವಿದೆ. ಅವನನ್ನು ಯಾವ ಆಯುಧಗಳು ಕೊಲ್ಲಲಾರವು. ಇದನ್ನು ನಿನಗೆ ಹೇಳಲು ನಾನು ಬಂದೆ.”

“ಆತ ಎಲ್ಲಿ ಇದ್ದಾನೆ?”
ಹುಡುಗನು ಕೇಳಿದನು.

“ಆತ ಒಬ್ಬ ಮುದುಕ.
ಚಂದ್ರನ ಮೇಲೆ ಇರುತ್ತಾನೆ. ”


“ಹಾಗಿದ್ದರೆ ನಾನು ಅವನನ್ನು ಹುಡುಕುವೆ. ಅವನ ಜತೆ ನಾನು ಗೆಳೆತನ ಮಾಡಬಹುದು. ” ಹುಡುಗನು ಹೇಳಿದನು.
ಆ ಹುಡುಗನು ಒಂದು ಸನ್ನೆಯನ್ನು ಎತ್ತಿದನು. ರೋಬೋ ಟ್ಯಾಂಕ ರಾಕೆಟ್ಟಿನ ತರಹ ಹಾರುತ್ತ ಅವನನ್ನು ಚಂದ್ರನ ಮೇಲೆ ಇಳಿಸಿತು.


ಚಂದ್ರನ ಮೇಲೆ ಅವನು ಅಲ್ಲಿ, ಇಲ್ಲಿ, ಎಲ್ಲ ಬದಿಯಲ್ಲಿ,
ಹುಡುಕತೊಡಗಿದನು.
ಕೊನೆಯಲ್ಲಿ ಅವನಿಗೆ ಓರ್ವ ಮುಪ್ಪಾದ ಮುದುಕ ಕಂಡನು.
ದುರ್ಬಿಣಿಯಲ್ಲಿಂದ ಕೆಳಗಿರುವ ನೀಲಿ ಗ್ರಹವನ್ನು ಅವನು
ದಿಟ್ಟಿಸಿ ನೋಡುತ್ತಿದ್ದನು.


“ನಿಮ್ಮನ್ನು ಯಾರೂ ಕೊಲ್ಲಲಾರರು ಎಂಬ ವ್ಯಕ್ತಿ ನೀವೇ ಇರಬಹುದೇ ?”
ಹುಡುಗನು ಕೇಳಿದನು.
“ಅಹುದು, ಸರಿ,” ಮುದುಕನು ಉತ್ತರಿಸಿದನು.


“ತಾವು ಈ ದುರ್ಬಿಣಿಯಿಂದ ಏನನ್ನು ನೀರಿಕ್ಷಿಸುತ್ತಿದ್ದಿರಿ ?”
“ ನಾನು ಕೆಳಗಿರುವ ಗ್ರಹಗಳ ಮೇಲೆ ಇರುವ ಜನರ ಅಭ್ಯಾಸ
ಮಾಡುತ್ತಿದ್ದೇನೆ.”



“ಏಕೆಂದರೆ ಬಾಂಬು ಹಾಗು ಬಂದೂಕಿನ ಗುಂಡುಗಳು ಯಾವದೇ ಹಾನಿಯನ್ನು ಮಾಡದೆ ಇರುವವನ ಜತೆ ನನಗೆ ಇರಬೇಕೆಂದೆನ್ನಿಸುತ್ತದೆ. ನನ್ನ ತಂದೆ ತಾಯಿ ಸತ್ತ ಮೇಲೆ ನಾನು ಬಹಳ ಅಳುತ್ತ ಕುಳಿತಿದ್ದೆ. ನನ್ನ ಕಣ್ಣಲ್ಲಿಯ ಕಣ್ಣೀರುಗಳು ಬತ್ತಿ ಹೋದವು. ನನಗೆ ಬೇಕಿದ್ದರೆ ನಾಯಿ ಮರಿಯನ್ನು ನನ್ನ ಜತೆ ಇರಲು ಅನುಮತಿ ಕೊಡಬಹುದಾಗಿತ್ತು. ಆದರೆ ಯಾರಾದರು ಅದನ್ನು ಕೊಂದು ಬಿಟ್ಟರೆ ಆ ನೋವಿನಿಂದ ನನಗೆ ಸಾವು ಬರಬಹುದು. ನಾನುಆ ಮುದುಕಿ ಇಲ್ಲವೆ ಹುಡುಗಿ ಹತ್ತಿರ ಕೂಡ ಇರಬಹುದಾಗಿತ್ತು. ಆದರೆ ಅವರ ಹತ್ತಿರ ಕೂಡ ಜೀವ ರಕ್ಷಿಸುವ ಯಾವ ಉಪಾಯಗಳು ಇರಲಿಲ್ಲ. ಏನಾದರೂ ಅನಾಹುತ ಸಂಭವಿಸಿದರೆ ನಾನೂ ಕೂಡ ಸಾಯಬಹುದಾಗಿತ್ತು.”



“ಸರಿ, ನೀನು ನನ್ನ ಜತೆ ಇರಬಹುದು.”
ಮುದುಕನು ಹೇಳಿದನು.

“ನಾನು ಇಲ್ಲಿ ಸುರಕ್ಷಿತವಾಗಿ ಇದ್ದೇನೆ.
ಏಕೆಂದರೆ ಇಲ್ಲಿ ಯಾವ ಶಸ್ತ್ರ- ಆಯುಧಗಳಿಲ್ಲ.”

“ಇದೇ ಕಾರಣವಿರಬಹುದೇ ?”
“ಅಹುದು. ಇದೇ ಕಾರಣ .”

“ಆದರೆ ನಾನಂತೂ
ಬಂದೂಕನ್ನು ತೆಗೆದುಕೊಂಡು
ಬಂದಿದ್ದೇನೆ. ”

“ಇದು ಬಹಳ ವಿಷಾದಕರವಾದ ಸಂಗತಿ. !” ಮುದುಕನು
ಹೇಳಿದನು. “ ಇಲ್ಲಿ ಇರಲು ನಾನು ಅನುಮತಿ
ಕೊಡಲಾರೆ.ಏಕೆಂದರೆ ನಿನಗೆ ಬೇಕಿದ್ದರೆ ನನ್ನನ್ನು ನೀನು
ಕೊಲ್ಲಬಹುದು. ”

“ಹಾಗಿದ್ದರೆ ನಾನು ಇಲ್ಲಿಂದ ಹೊರಟು
ಹೋಗಬೇಕೆ ?” ಹುಡುಗನು ಕೇಳಿದನು.



“ಅಹುದು, ಹೋಗಬೇಕು.” ಮುದುಕನು
ಉತ್ತರಿಸಿದನು. “ ನನಗೆ ಬಹಳ
ಕೆಟ್ಟೆನ್ನಿಸುತ್ತದೆ !” ಹುಡುಗನ ಉತ್ತರ.

“ನಿನಗೆ ನಿಜವಾಗಿಯೂ ಕೆಡಕೆನ್ನಿಸುತ್ತದೆಯೋ?”

“ಅಹುದು. ನಿಜವಾಗಿ. ನನಗೆ ಇಲ್ಲಿಯೇ ಇದ್ದು ಬಿಡಬೇಕೆಂದಿನ್ನಿಸು ತ್ತದೆ.,” ಹುಡುಗ ಹೇಳತೊಡಗಿದನು.

“ನೀನು ನಿನ್ನ ಬಂದೂಕನ್ನು ಎಸೆಯಬಹುದೇ?”

“ಒಗೆಯಬಹುದು..”

“ಹಾಗಿದ್ದರೆ ಈ ಮುದುಕನ ಜತೆ ನೀನು ನೆಮ್ಮದಿಯಿಂದ ಇರಬಹುದು,” ಮುದುಕನು ಹೇಳಿದನು.

“ಇದೇ ಸರಿಹೋಗಬಹುದು ,” ಹುಡುಗ ಹೇಳಿದನು.



“ಆದರೆ ನಾನು ಇಲ್ಲಿ ಇದ್ದು ಏನು ಮಾಡಬೇಕಾಗಬಹುದು ?”



“ನೀನು ಈ ದುರ್ಬಣಿಯಿಂದ ಕೆಳಗೆ ನೋಡುತ್ತಿರು ಹಾಗು
ಕೆಳಗಿದ್ದ ಜನ ತಮ್ಮತಮ್ಮೊಳಗೆ ಇಷ್ಟೊಂದು ಜಗಳವೇಕೆ
ಆಡುತ್ತಿದ್ದಾರೆ ಎಂಬುದನ್ನು ಕಂಡುಹಿಡಿ.”



“ಏಕೆಂದರೆ ಅವರಿಗೆ ಪರಸ್ಪರರ ಬಗ್ಗೆ ಏನೂ ತಿಳಿದಿರುವದಿಲ್ಲ .

ಏಕೆಂದರೆ ಜನಸಂಖ್ಯೆ ಇಷ್ಟೊಂದು ಬೆಳೆದಿದ್ದರಿಂದ ತಾವು ಎಷ್ಟು ಹಾನಿ ಮಾಡಿತ್ತಿದ್ದೇವೆ ಎಂಬುದರ ಅರಿವು ಅವರಿಗಿಲ್ಲ.

ಏಕೆಂದರೆ ಕೆಲ ಜನರು ಹೊಟ್ಟೆ ಬಿಗಿಯುವಷ್ಟು ತಿನ್ನುತ್ತಿರುವದರಿಂದ ಉಳಿದವರಿಗೆ ಅರೆಹೊಟ್ಟೆಯಿಂದ ಮಲಗಬೇಕಾಗುತ್ತದೆ.

ತಾವು ತಯಾರಿಸಿದ ಕಬ್ಬಿಣದಿಂದ ಗುದ್ದಲಿ ಆಗುತ್ತಿದೆಯೋ ಇಲ್ಲವೆ ಬಂದೂಕು ಎಂಬುದು ಅವರಿಗೆ ಗೊತ್ತಾಗುವದಿಲ್ಲ.

ತಮ್ಮ ಹೊಟ್ಟೆಪಾಡಿಗಾಗಿ ದುಡಿಯುತ್ತಿರುವದರಂದ ಉಳಿದವರ ವಿಚಾರವನ್ನು ಅವರು ಮಾಡುವದಿಲ್ಲ.

ತಾವು ಮಾಡುತ್ತಿರುವ ಕೆಟ್ಟ ಕೆಲಸಗಳ ಅರಿವಾದಲ್ಲಿ ತಾವು ಎಲ್ಲಿ ತಪ್ಪಿದ್ದೇವೆ ಎಂಬುದು ಅವರಿಗೆ ತಿಳಿಯುತ್ತಿತ್ತು. .”


“ಆದರೆ ಯಾರಾದರೂ ಈ ಸತ್ಯವನ್ನು ಅವರಿಗೆ
ತಿಳಿ ಹೇಳಬೇಕು.!” ಹುಡುಗ ಹೇಳಿದನು..


“ಸರಿ ,” ಮುದುಕ
ಉತ್ತರಿಸಿದನು. “ನಾನೀಗ
ಬಹಳ ಮುದುಕನಾಗಿದ್ದೇನೆ
ಹಾಗು ದಣಿದಿದ್ದೇನೆ.”


ಆ ಹುಡುಗನು ತನ್ನ ಕೈಯಲ್ಲಿದ್ದ ಬಂದೂಕನ್ನು ಕೆಳಗೆ
ಒಗೆದನು.ಬಂದೂಕು ಅಂತರಿಕ್ಷದಲ್ಲಿ ಬಿತ್ತು ಹಾಗು ಅದು ಒಂದು
ಚಿಕ್ಕ ಗ್ರಹವನ್ನು ತುಂಡುತುಂಡಾಗಿ ಮಾಡುತ್ತ ನಷ್ಟಗೊಳಿಸಿತು.


ಹುಡುಗ ಆ ಮುದುಕನ ಜತೆ ಸಾಕಷ್ಟು ವರ್ಷ ಇದ್ದನು.
ದುರ್ಬೀಣಿಯಿಂದ ನೋಡುತ್ತ ಕೆಳಗಿದ್ದ ಜನರನ್ನು
ತಿಳಿದುಕೊಳ್ಳಲು ಪ್ರಯತ್ನಿಸುತ್ತಿದ್ದನು.
ಒಂದು ದಿನ ಹುಡುಗ ಹಾರುತ್ತ ತಿರುಗಿ ಬರಬಹುದು ಹಾಗು ತಾನು
ಕಲಿತದ್ದನ್ನೆಲ್ಲ ಜನರಿಗೆ ತಿಳಿಸಿ ಹೇಳಬಹುದು.



ನೀಲಿ ಹುಡುಗ ಯುದ್ದಜ್ವರದಿಂದ ಬರಳುತ್ತಿರುವ ಗ್ರಹದ ಮೇಲೆ ಇದ್ದಾನೆ. ಹಾಗು ಅವನು ತಬ್ಬಲಿ ಹಾಗು ಒಬ್ಬಂಟಿಗನಾಗಿದ್ದಾನೆ. ಯಾರಾದರೂ ಗೆಳೆತನಕ್ಕೆ ಮುಂದೆ ಬಂದರೆ ತಳ್ಳಿ ಹಾಕುತ್ತಾನೆ. ಆದರೆ ಆ ಯುದ್ಧಭೂಮಿಯ ಮೇಲೆ ಅಲೆದಾಡುವಾಗ ಬಂದೂಕು ಹಾಗು ಬಾಂಬುಗಳಿಂದ ಸುರಕ್ಷಿತವಾಗಿ ಇರುವ ಯಾರಾದರೂ ಒಬ್ಬನು ದೊರೆಯಬಹುದೆಂಬ ಆಸೆಯಿಂದ ಹಾಗು ಅಂತಹನ ಜತೆ ಗೆಳೆತನ ಮಾಡಲು ಹವಣಿಸುತ್ತಿದ್ದಾನೆ.

ನೀಲಿ ಹುಡುಗ ಇದು ಒಂದು ಹೃದಯವನ್ನು ನಾಟುವ ಪುಸ್ತಕ.